ಕರ್ನಾಟಕ ಲೋಕಸೇವಾ ಆಯೋಗ

ದೂರವಾಣಿ: 22268390, ಫಾಕ್ಸ್: 22266481
ಅಂಚೆ ಪೆಟ್ಟಿಗೆ ನಂ. 5056
ಇ-ಮೇಲ್ :kpsc-ka@nic.in

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ
"ಉದ್ಯೋಗ ಸೌಧ ",
ವೆಬ್ ಸೈಟ್: http://kpsc.kar.nic.in

ಸಂಖ್ಯೆ: ಪಿಎಸ್ ಸಿ 12 ಆರ್‌ಟಿಬಿ(2) /2023-24/19

ದಿನಾಂಕ:13/04/2023

ಅಡಕಗಳು:

ಇಂದ:

ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ,
ಬೆಂಗಳೂರು.

ಇವರಿಗೆ:-

ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021 ರಲ್ಲಿ ನಿಗದಿಪಡಿಸಿರುವ ಕನಿಷ್ಟ ಶೇ.35 ರಷ್ಟು ಅರ್ಹತಾ ಅಂಕಗಳನ್ನು ತಿದ್ದುಪಡಿಗೊಳಿಸುವ ಬಗ್ಗೆ.

ಉಲ್ಲೇಖ:- ಸಿಆಸುಇ 43 ಸೇವನೆ 2020, ದಿ:05-03-2021

***

ಕರ್ನಾಟಕ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021 ನ್ನು ಜಾರಿಗೊಳಿಸಿದ್ದು, ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವ ಸಂಬಂಧ ಉಪನಿಯಮ 6 ರಲ್ಲಿನ ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ಸಂಬಂಧಿಸಿದಂತೆ ಮೊದಲ ಪರಂತುವಿನಲ್ಲಿ ಹಾಗೂ ಉಪನಿಯಮ 6(2)ರಲ್ಲಿನ ಗ್ರೂಪ್ 'ಸಿ' ಹುದ್ದೆಗಳಿಗೆ ಸಂಬಂಧಿಸಿದಂತೆ ಮೊದಲ ಪರಂತುವಿನಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

"ಅಭ್ಯರ್ಥಿಗಳು ಅರ್ಹತೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಒಟ್ಟು ಅಂಕಗಳಲ್ಲಿ ಕನಿಷ್ಟ ಪಕ್ಷ ಶೇ.35 ರಷ್ಟು ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ".

ಮುಂದುವರೆದು, ಸದರಿ ನಿಯಮಗಳಲ್ಲಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಪ್ರತಿಯೊಂದು ತಪ್ಪು ಉತ್ತರಕ್ಕೆ ಋಣಾತ್ಮಕ ಅಂಕಗಳನ್ನು ಸಹ ನಿಗದಿಪಡಿಸಲಾಗಿದ್ದು, ಅದರಂತೆ 1/4 ಭಾಗದಷ್ಟು ಅಂಕಗಳನ್ನು ಕಡಿತಗೊಳಿಸಬೇಕಾಗುತ್ತದೆ. ಈ ಮಾನದಂಡಗಳ ಹಿನ್ನಲೆಯಲ್ಲಿ ಶೇ.35 ರಷ್ಟು ಅಂಕಗಳನ್ನು ಅರ್ಹತೆಯನ್ನಾಗಿ ನಿಗದಿಪಡಿಸಿರುವುದರಿಂದ ಆಯ್ಕೆಪ್ರಕ್ರಿಯೆಯಲ್ಲಿ ಕೆಳಕಂಡ ನ್ಯೂನ್ಯತೆಗಳು ಕಂಡುಬರಲಿವೆ:-

1. ಋಣಾತ್ಮಕ ಅಂಕಗಳಿರುವುದರಿಂದ ಶೇ.35 ರಷ್ಟು ಅಂಕಗಳನ್ನು ಪಡೆಯಲು ಅಭ್ಯರ್ಥಿಗಳಿಗೂ ಕಷ್ಟಸಾಧ್ಯವಾಗಲಿದ್ದು, ಆಯ್ಕೆ ಪಟ್ಟಿ ಸಿದ್ಧಪಡಿಸುವ ಸಂದರ್ಭದಲ್ಲಿ ಶೇ.35 ಅಂಕಗಳನ್ನು ಪಡೆದ ಅರ್ಹ ಅಭ್ಯರ್ಥಿಗಳು ಆಯ್ಕೆಗೆ ಲಭ್ಯವಾಗುವುದಿಲ್ಲ.
2. ಇದರಿಂದಾಗಿ ಅಧಿಸೂಚಿಸಿದಷ್ಟು ಹುದ್ದೆಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ನೇಮಕಾತಿ ಪ್ರಾಧಿಕಾರಗಳಿಗೆ ಪ್ರಸ್ತಾವನೆ ಸಲ್ಲಿಸಿದಷ್ಟು ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಕಳುಹಿಸಲು ಸಾಧ್ಯವಾಗದಿದ್ದಲ್ಲಿ ಸರ್ಕಾರದ ಆಡಳಿತ ಯಂತ್ರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ.

3. ಈ ರೀತಿ ಭರ್ತಿಯಾಗದ ಹುದ್ದೆಗಳನ್ನು ನಿಯಮಾನುಸಾರ ಮುಂದಿನ ನೇಮಕಾತಿಗೆ ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ಮತ್ತೊಮ್ಮೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗುತ್ತದೆ.

4. ಮತ್ತೊಮ್ಮೆ ಈ ರೀತಿ ಭರ್ತಿಯಾಗದ ಹುದ್ದೆಗಳನ್ನು ಅಧಿಸೂಚಿಸಿ ಆಯ್ಕೆಪ್ರಕ್ರಿಯೆ ಪೂರ್ಣಗೊಳಿಸಲು ವರ್ಷಗಳ ಕಾಲ ಸಮಯ ತೆಗೆದುಕೊಳ್ಳುವುದರಿಂದ ನೇಮಕಾತಿ ವಿಳಂಬವಾಗುತ್ತದೆ.

5. ಅಲ್ಲದೇ ಮತ್ತೊಮ್ಮೆ ಹುದ್ದೆಗಳನ್ನು ಅಧಿಸೂಚಿಸಿದರೂ ಮೇಲ್ಕಂಡಂತೆ ಶೇ.35 ಅಂಕಗಳ ಮಾನದಂಡವನ್ನು ನಿಗದಿಪಡಿಸಿರುವುದರಿಂದ ಪುನಃ ಅಭ್ಯರ್ಥಿಗಳು ಆಯ್ಕೆಗೆ ಲಭ್ಯವಾಗುತ್ತಾರೆ ಎಂಬ ಬಗ್ಗೆ ಖಚಿತತೆ ಇರುವುದಿಲ್ಲ.

6. ಪುನರಾವರ್ತಿತವಾಗಿ ಅಧಿಸೂಚನೆ ಜಾರಿ ಮಾಡಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡು ಆಯ್ಕೆಪ್ರಕ್ರಿಯೆ ಪೂರ್ಣಗೊಳಿಸಬೇಕಾದಲ್ಲಿ ಅಭ್ಯರ್ಥಿಗಳಿಗೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗುತ್ತದೆ.

ಮೇಲ್ಕಂಡ ಅಂಶಗಳನ್ನು ಅವಲೋಕಿಸಲು ವಿನಂತಿಸುತ್ತಾ, ಕರ್ನಾಟಕ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021 ರಲ್ಲಿ ನಿಗದಿಪಡಿಸಿರುವ ಕನಿಷ್ಠ ಶೇ.35 ರಷ್ಟು ಅರ್ಹತಾ ಅಂಕಗಳ ಮಾನದಂಡದ ಕುರಿತು ತಿದ್ದುಪಡಿ ಮಾಡುವ ಸಂಬಂಧ ಪುನರಾವಲೋಕಿಸುವಂತೆ ಹಾಗೂ ಅಗತ್ಯ ಕ್ರಮವಹಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ

(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ
ಕರ್ನಾಟಕ ಲೋಕ ಸೇವಾ ಆಯೋಗ